ಅಧ್ಯಕ್ಷರು.— ಆಗುವುದಿಲ್ಲ. ತಮಗೆ ಸ್ಪೆಷಲ್ ಆಗಿ ರೂಲಿಂಗ್ ಕೊಟ್ಟಿದ್ದೇನೆ. ದಯವಿಟ್ಟು ಕುಳಿತುಕೊಂಡು ವಿಶ್ರಾಂತಿ ತೆಗೆದುಕೊಳ್ಳಿ. ಮತ್ತೆ ನೀವೇನಾದರೂ ಹೇಳಿದರೆ ಯಾವುದೂ ರೆಕಾರ್ಡ್ ಆಗುವುದಿಲ್ಲ.

ಗಮನ ಸೆಳೆಯುವ ಸೂಚನೆಗಳು

೧ ಭೀಮಾನದಿಗೆ ಉಜ್ಜನಿ ಅಣೆಕಟ್ಟಿನಿಂದ ನೀರನ್ನು ಬಿಡುವುದು

ಶ್ರೀ ಧರ್ಮಸಿಂಗ್ (ಜೇವರ್ಗಿ).— ಸ್ವಾಮಿ, ಭೀಮಾ ನದಿಗೆ ಉಜ್ಜನಿ ಅಣೆಕಟ್ಟಿನಿಂದ ನೀರು ಬಿಡುವ ಬಗ್ಗೆ ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರ ಗಮನವನ್ನು ಸೆಳೆಯ ಬಯಸುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಉತ್ತರ ಈ ರೀತಿ ಇದೆ.

ಕಳೆದ ಎರಡು ವರ್ಷಗಳಲ್ಲಿ ಅಂದರೆ ೧೯೮೬ ಮತ್ತು ೧೯೮೭ರಲ್ಲಿ ಬರಗಾಲ ಪರಿಸ್ಥಿತಿಯಿಂದ ಕೃಷ್ಣ ಮತ್ತು ಭೀಮಾ ನದಿಗಳಲ್ಲಿ ಕುಡಿಯುವುದಕ್ಕೂ ಸಹ ನೀರು ಲಭ್ಯವಿಲ್ಲದ್ದರಿಂದ ಮಹಾರಾಷ್ಟ್ರ ಸರ್ಕಾರವನ್ನು ಕೋರಿ ಕೃಷ್ಣ ನದಿಯಲ್ಲಿ ೧೯೮೬ ಮತ್ತು ೧೯೮೭ರಲ್ಲಿ ಮತ್ತು ಭೀಮಾ ನದಿಯಲ್ಲಿ ೧೯೮೬ರಲ್ಲಿ ನೀರನ್ನು ಬಿಡಿಸಿಕೊಳ್ಳಲಾಗಿತ್ತು. ೧೯೮೭ರಲ್ಲಿ ಕೊಯ್ನ ಜಲಾಶಯದಿಂದ ನೀರನ್ನು ಬಿಡಿಸಿಕೊಳ್ಳಲು ಮಹಾರಾಷ್ಟ್ರ ಸರ್ಕಾರದೊಡನೆ ಚರ್ಚಿಸಿದಾಗ ಇನ್ನು ಮುಂದೆ ಮಹಾರಾಷ್ಟ್ರ ಸರ್ಕಾರದ ಜಲಾಶಯದಿಂದ ಕರ್ನಾಟಕಕ್ಕೆ ಕುಡಿಯುವ ನೀರಿಗಾಗಿ ನೀರು ಬಿಡಲು ಸಾಧ್ಯವಾಗುವುದಿಲ್ಲವೆಂದು, ನಮ್ಮರಾಜ್ಯದಲ್ಲಿರುವ ಜಲಾಶಯದಿಂದಲೇ ಈ ಉದ್ದೇಶಕ್ಕಾಗಿ ನೀರನ್ನು ಕಾದಿರಿಸಿಕೊಳ್ಳಬೇಕೆಂದು ಸೂಚಿಸಿದ್ದರು. ಆದರಂತೆ ಈ ವರ್ಷ ಕೃಷ್ಣ ನದಿಯ ದಂಡೆ ಮೇಲಿರುವ ಪಟ್ಟಣ ಮತ್ತು ಗ್ರಾಮಗಳ ಕುಡಿಯುವ ನೀರಿಗಾಗಿ ಘಟಪ್ರಭ ಜಲಾಶಯದಲ್ಲಿ ನೀರನ್ನು ಉಳಿಸಿಕೊಂಡು ಅದನ್ನು ಕೃಷ್ಣ ನದಿಗೆ ಬಿಡಲಾಗುತ್ತಿದೆ. ಭೀಮಾ ನದಿಯ ಮೇಲೆ ನಮ್ಮ ರಾಜ್ಯದಲ್ಲಿ ಯಾವ ಜಲಾಶಯವೂ ನಿರ್ಮಾಣವಾಗಿಲ್ಲ. ಮಹಾರಾಷ್ಟ್ರದ ಉಜ್ಜನಿ ಜಲಾಶಯವು ನಮ್ಮ ರಾಜ್ಯದ ಗಡಿಯಿಂದ ಸುಮಾರು ೧೦೪ ಮೈಲಿಗಳ ದೂರದಲ್ಲಿದೆ. ೧೯೮೭ರಲ್ಲಿ ಉಜ್ಜನಿ ಜಲಾಶಯದಿಂದ ನೀರು ಬಿಡಲು ಕೋರಿದರೂ ನೀರು ಬಿಡಲು ಮಹಾರಾಷ್ಟ್ರ ಸರ್ಕಾರಕ್ಕೆ ಸಾಧ್ಯವಾಗಲಿಲ್ಲ.

ಶ್ರೀ ಧರ್ಮಸಿಂಗ್,—ಮಾನ್ಯ ಅಧ್ಯಕ್ಷರೆ. ಹೋದಸಾರಿಯೂ ಕೂಡ ಅವರು ಹೇಳಿದ್ದುದು ಪತ್ರಿಕೆಯಲ್ಲಿ ಬಂದಿತ್ತು. ನಾವೂ ಕೂಡ ಈ ಬಗ್ಗೆ ಹೇಳಿದ್ದೇವೆ, ಗುಲ್ಬರ್ಗ ಜಿಲ್ಲಾ ಪರಿಷತ್ತಿನಿಂದಲೂ ರೆಸಲ್ಯೂಷನ್ ಮಾಡಿ ಕಳುಹಿಸಿದ್ದಾರೆ. ಉಜ್ಜನಿ ಡ್ಯಾಮ್‌ನಿಂದ ಭೀಮಾ ನದಿಗೆ ನೀರು ಬಿಡುವ ಕೆಲಸ ಆಗಬೇಕು ಎಂದು ಹೇಳಿದ್ದೇವೆ. ಕರ್ನಾಟಕ ಸರ್ಕಾರದವರು ಮಹಾರಾಷ್ಟ್ರ ಸರ್ಕಾರಕ್ಕೆ ಕೇಳಿಕೊಳ್ಳಬೇಕು ಎಂದು ಹೇಳಿದ್ದೆವು. ಈ ಬಗ್ಗೆ ನೆಗೋಷಿಯೇಷನ್ ಆಗಿದೆಯೆ ? ಗುಲ್ಬರ್ಗ ಜಿಲ್ಲೆಯಲ್ಲಿ ಅಫ್ಜಲ್‌ಪುರ ಮತ್ತು ಜೇವರ್ಗಿ ತಾಲ್ಲೂಕುಗಳು ಭೀಮಾತೀರ ನದಿ ದಂಡೆಯಮೇಲೆ ಬರತಕ್ಕ ಜಾಗಗಳಲ್ಲಿ ನೀರೇ ಇಲ್ಲದೆ ತೊಂದರೆಯಾಗುತ್ತಿದೆ. ಕುಡಿಯಂವ ನೀರಿಗೂ ತೊಂದರೆಯಾಗುತ್ತಿದೆ. ಇದಕ್ಕೆ ಸರ್ಕಾರದವರು ಕ್ರಮ ತೆಗೆದುಕೊಳ್ಳಬೇಕು, ಉಜ್ಜನಿ ಡ್ಯಾಮ್ ೧೮೪ ಮೈಲಿ ದೂರ ಇರುವುದರಿಂದ ನೀರು ಬಿಡುವುದು ಸಾಧ್ಯವಾಗುವುದಿಲ್ಲ ಎಂದು ಹೇಳಿದ್ದಾರೆ. ಇದಾಗದಿದ್ದರೆ ಬೇರೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದರ ಬಗ್ಗೆ ನಿರ್ದಿಷ್ಟವಾದ ಉತ್ತರಬೇಕು. ಬರಗಾಲದಿಂದ ನೀರಿನ ಕೊರತೆ ಹೆಚ್ಚಾಗಿದೆ. ಗುಲ್ಬರ್ಗ ಜಿಲ್ಲೆಯಲ್ಲಿ ನದಿ ದಂಡೆಯಲ್ಲಿರುವ ಎಲ್ಲಾ ಕಡೆ ನೀರಿಲ್ಲದೆ ತೊಂದರೆಯಾಗುತ್ತಿದೆ. ಜಿಲ್ಲಾ ಪರಿಷತ್ ವತಿಯಿಂದ ಅಧ್ಯಕ್ಷರು ಕೇಳಿದ್ದಾರೆ, ನಾವು ಕೇಳಿದ್ದೇವೆ. ಈ ಬಗ್ಗೆ ಸರ್ಕಾರದವರು ಏನು ಪರಿಹಾರ ಕಂಡುಹಿಡಿದಿದ್ದಾರೆ ?

ಶ್ರೀ ಹೆಚ್.ಡಿ. ದೇವೇಗೌಡ.— ಭೀಮಾ ನದಿಯ ಮೇಲೆ ಯಾವುದೇ ಜಲಾಶಯ ಇಲ್ಲ ಎಂಬುದು ನಿಜ. ಈ ಜಲಾಶಯ ನಿರ್ಮಾಣ ಮಾಡಿ ನೀರಾವರಿಗೆ ನೀರು ಕೊಡತಕ್ಕ ಕಾಲದಲ್ಲಿ ಕೆಲವೊಂದು ಭಾಗವನ್ನು ಕುಡಿಯುವ ನೀರಿಗೆ ಮೀಸಲಾಗಿಡಬೇಕಾದರೆ ಸಾಕಷ್ಟು ಕಾಲ ಹಿಡಿಯುತ್ತದೆ. ಕೃಷ್ಣಾ

ಬೇಸಿನ್ ನೀರಿನ ಹಂಚಿಕೆ ಸಂಬಂಧದಲ್ಲಿ ಕೆಲವು ಭಾಗವನ್ನು ಇಟ್ಟಿದ್ದಾರೆ. ಇಷ್ಟೇ ಪ್ರಶ್ನೆ ಈಗಿರುವುದು ಇದನ್ನು ಕಾರ್ಯಗತ ಮಾಡುವುದಕ್ಕೆ ಇವೊತ್ತು ಆಗುವುದಿಲ್ಲ. ಇದು ವಾಸ್ತವಾಂಶ. ಉಜ್ಜನಿಯಿಂದ ನೀರು ಬಿಡುವುದಕ್ಕೆ ಮಹಾರಾಷ್ಟ್ರ ಮುಖ್ಯಮಂತ್ರಿಗಳೊಡನೆ ಚರ್ಚೆ ಮಾಡಿದಾಗ ಅಧಿಕಾರಿಗಳು ಕೂಡ ಇದ್ದರು. ಅಲ್ಲಿ ನೀರಿನ ಸಂಗ್ರಹಣಾ ಶಕ್ತಿ ಕಡಿಮೆ ಇದೆ. ಸ್ವಲ್ಪ ಭಾಗ ನೀರು ಬಿಟ್ಟರೂ ಬಿಸಿಲಿನ ರಭಸದಲ್ಲಿ ಹರಿದು ಬರುವಾಗ ಇಂಗಿ ಹೋಗುತ್ತದೆ, ಆದರಿಂದ ಪ್ರಯೋಜನವಾಗುವುದಿಲ್ಲ ಎಂದು ಅಧಿಕಾರಿಗಳು ಹೇಳಿದರು. ಆದ್ದರಿಂದ ನಾನು ಒತ್ತಾಯ ಮಾಡಲಿಲ್ಲ. ವಾಸ್ತವಾಂಶ ಹೀಗಿರುವುದರಿಂದ ಪ್ರಯೋಜನವಾಗುವುದಿಲ್ಲ ಎಂದು ಕೈಬಿಟ್ಟೆ. ನಗರ ಪ್ರದೇಶದಲ್ಲಿ ಕೆಲವು ಕಡೆ ನೀರಿಲ್ಲ ಎಂದೂ ಹೇಳಿದ್ದಾರೆ. ಇದಕ್ಕೆ ಪ್ರತ್ಯೇಕವಾದ ಪ್ರಶ್ನೆ ಹಾಕಿದರೆ ನಗರಾಭಿವೃದ್ಧಿ ಸಚಿವರು ಉತ್ತರ ಕೊಡುತ್ತಾರೆ. ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿನ ಕೊರತೆ ಇದ್ದರೆ ಮತ್ತೊಂದು ಪ್ರಶ್ನೆ ಹಾಕಿದರೆ ಗ್ರಾಮೀಣಾಭಿವೃದ್ಧಿ ಸಚಿವರು ಉತ್ತರ ಕೊಡುತ್ತಾರೆ. ನನ್ನ ಪತ್ತಿರ ಏನೂ ಮಾಹಿತಿ ಇಲ್ಲದಿರುವುದರಿಂದ ಉತ್ತರ ಕೊಡುವುದಕ್ಕಾಗುವುದಿಲ್ಲ.

ಶ್ರೀ ಧರ್ಮಸಿಂಗ್.—ಮಹಾರಾಷ್ಟ್ರ ಸರ್ಕಾರದ ಜೊತೆ ಮಾತನಾಡಿದ್ದೇನೆ, ಅವರು ನೀರು ಬಿಡುವುದಕ್ಕೆ ಒಪ್ಪುತ್ತಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದೀರಿ. ಸರ್ಕಾರದವರು ಬೇರೆ ಏನಾದರೂ ವ್ಯವಸ್ಥೆ ಮಾಡಬೇಕಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಇಂತಿಂಥ ಹಳ್ಳಿಗಳಲ್ಲಿ ತೊಂದರೆ ಇದೆ ಎಂದು ಹೇಳಿದರೆ ಲಾರಿ ಮೂಲಕವೋ ಬೇರೆ ರೀತಿಯಲ್ಲೋ ಸಂಬಂಧಪಟ್ಟ ಮಂತ್ರಿಗಳು ನೀರು ಕೊಡಬೇಕಾಗುತ್ತದೆ.

ಶ್ರೀ ಧರ್ಮಸಿಂಗ್.—ಜೇವರ್ಗಿ ಮತ್ತು ಅಫ್ಜಲ್‌ಪುರ ತಾಲ್ಲೂಕಿನಲ್ಲಿ ತೊಂದರೆ ಇದೆ.

ಶ್ರೀ ಹೆಚ್. ಡಿ. ದೇವೇಗೌಡ.—ಆ ಬಗ್ಗೆ ನನ್ನ ಬಳಿ ಸರಿಯಾದ ಮಾಹಿತಿ ಇಲ್ಲದಿರುವುದರಿಂದ ಉತ್ತರ ಕೊಡುವುದಕ್ಕಾಗುವುದಿಲ್ಲ. ನಾನು ತಪ್ಪಾಗಿ ಹೇಳಿ ಈ ಸಭೆಯನ್ನು ಮಿಸ್‌ಲೀಡ್ ಮಾಡುವುದಕ್ಕೆ ಇಷ್ಟವಿಲ್ಲ.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್.—ಅನೇಕ ಗ್ರಾಮಗಳಲ್ಲಿ ಕುಡಿಯುವ ನೀರಿನ ತೊಂದರೆಯಾಗುತ್ತಿದೆ. ಕೊಳವೆ ಬಾವಿಗಳನ್ನು ತೋಡಿದರೂ ನೀರು ಬರುತ್ತಿಲ್ಲ. ಭೀಮಾ ನದಿ ಇರುವುದರಿಂದ ಸ್ಕೋರೇಜ್ ಮಾಡುವ ಸಲುವಾಗಿ ಸಣ್ಣ ಸಣ್ಣ ಬ್ಯಾರೇಜ್ ಮಾಡುವ ಬಗ್ಗೆ ಸರ್ಕಾರದ ಗಮನಕ್ಕೆ ತಂದಿದ್ದೆವು. ಆದನ್ನೂ ಮಾಡಲಿಲ್ಲ. ನೀರಿನ ಸಮಸ್ಯೆ ವಿಕೋಪಕ್ಕೆ ಹೋಗಿರುವುದರಿಂದ ಮಾನ್ಯ ಲೋಕೋಪಯೋಗಿ ಮಂತ್ರಿಗಳು ಗಮನ ಹರಿಸಬೇಕು. ಗ್ರಾಮೀಣ ಜನರಿಗೆ ತೊಂದರೆಯಾಗಿದೆ. ಮಹಾರಾಷ್ಟ್ರ ಸರ್ಕಾರದ ಜೊತೆ ಚರ್ಚಿಸಿ ಕೂಡಲೇ ನೀರು ಬಿಡುವ ವ್ಯವಸ್ಥೆ ಮಾಡಬೇಕೆಂದು ಪುನಃ ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಯಾವುದಾದರೂ ಹಳ್ಳಿಯಲ್ಲಿ ತೊಂದರೆ ಇರುವುದನ್ನು ನಿಖರವಾಗಿ ಹೇಳಿದರೆ ನೀರು ಕೊಡುವುದು ಸರ್ಕಾರದ ಕರ್ತವ್ಯ ಇದೆ. ಸರ್ಕಾರ ಆದ್ಯತೆ ನೀಡುತ್ತದೆ. ಇದರ ಬಗ್ಗೆ ಸಂಶಯ ಪಡಬೇಕಾಗಿಲ್ಲ. ಯಾವ ಯಾವ ಹಳ್ಳಿಗಳಲ್ಲಿ ತೊಂದರೆ ಇದೆ ಎನ್ನುವುದನ್ನು ಸಭೆಯಲ್ಲಿ ತಿಳಿಸಿದರೆ ಉತ್ತರ ಕೊಡುತ್ತೇನೆ. ಸರ್ಕಾರದ ಪರವಾಗಿ ನಾನು ಉತ್ತರ ತರಿಸಿ ಹೇಳುತ್ತೇನೆ. ಭೀಮಾ ನದಿಗೆ ಉಜ್ಜನಿ ಡ್ಯಾಮ್‌ನಿಂದ ನೀರು ತರುವುದಕ್ಕೆ ಸಾಧ್ಯವಿಲ್ಲ. ನಗರ ಪ್ರದೇಶಗಳ ಬಗ್ಗೆ ಮತ್ತು ಹಳ್ಳಿಗಳ ಬಗ್ಗೆ ಸಮಸ್ಯೆಗಳಿದ್ದರೆ ಪ್ರತ್ಯೇಕವಾಗಿ ಅದನ್ನು ಪ್ರಸ್ತಾಪ ಮಾಡಿದರೆ ಉತ್ತರ ಕೊಡುತ್ತೇವೆ.

ಶ್ರೀ ಮಾಲೀಕಯ್ಯ ವಿ ಗುತ್ತೇದಾರ್.—ಉಜ್ಜನಿ ಜಲಾಶಯದಿಂದ ಸೊಲ್ಲಾಪುರದವರೆಗೆ ಕುಡಿಯುವ ನೀರನ್ನು ಬಿಡುತ್ತಿದ್ದಾರೆ. ಆದರೆ ನೀರು ಬಿಡುವ ಸಮಯವನ್ನು ಎರಡು ಗಂಟೆ ಹೆಚ್ಚು ಮಾಡಿದರೆ ನಮ್ಮ ಕ್ಷೇತ್ರಕ್ಕೆ ಮತ್ತು ಗುಲ್ಬರ್ಗ ಜಿಲ್ಲೆಗೆ ನೀರು ಬರಬಹುದು.

ಶ್ರೀ ಧರ್ಮಸಿಂಗ್.—ಸ್ಪಷ್ಟವಾಗಿ ಮಾನ್ಯ ಮಂತ್ರಿಗಳು ಉಜ್ಜನಿ ಡ್ಯಾಂನಿಂದ ಭೀಮಾ ನದಿಗೆ ನೀರನ್ನು ಬಿಡುವುದಕ್ಕಾಗುವುದಿಲ್ಲವೆಂದು ಮಹಾರಾಷ್ಟ್ರದ ಮುಖ್ಯ ಮಂತ್ರಿಗಳ ಜೊತೆಯಲ್ಲಿ ಆದಂತಹ ಚರ್ಚೆಯ ಆಧಾರದ ಮೇಲೆ ಹೇಳಿದ್ದಾರೆ. ಇದರ ಬಗ್ಗೆ ಅಧಿಕಾರಿಗಳಿಗೆ ಆದೇಶವನ್ನು ಕೊಡಬೇಕು. ಬದಲಿ ವ್ಯವಸ್ಥೆಯನ್ನು ಏನಾದರೂ ಮಾಡಬೇಕು. ನದಿಯಲ್ಲಿ ಬೇರೆ ಬೇರೆ ಕಡೆ ಗುಂಡಿಗಳನ್ನು ಆದರೂ ತೆಗೆಯಿಸಿ ಅಲ್ಲಿ ನೀರನ್ನು ಶೇಖರಣೆ ಮಾಡಿ ಆದರ ಮುಖಾಂತರವಾದರೂ ನೀರನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ತಾಲ್ಲೂಕಿನಲ್ಲಿ ಏನಾದರೂ ತೊಂದರೆ ಇದ್ದರೆ.

ಶ್ರೀ ಧರ್ಮಸಿಂಗ್.—ಭೀಮಾ ನದಿ ದಂಡೆಯಲ್ಲಿರತಕ್ಕ ಹಳ್ಳಿಗಳಿಗೆ ಕುಡಿಯುವ ನೀರಿಗೆ ತೊಂದರೆಯಾಗಿದೆ.

ಶ್ರೀ ಎಚ್. ಡಿ. ದೇವೇಗೌಡ.—ನಾಳೆ ಬೆಳಗ್ಗೆ ಇನ್ನೊಂದು ಪ್ರಶ್ನೆಯನ್ನು ಹಾಕಿ, ಇಂತಿಂಥ ಹಳ್ಳಿಗಳಲ್ಲಿ ತೊಂದರೆಯಾಗಿದೆ ಎಂದು ಹೇಳಿದರೆ, ಅಲ್ಲಿ ಈಗ ಇರತಕ್ಕ ವ್ಯವಸ್ಥೆಯನ್ನು ನೋಡಿ ಬೇರೆ ಕೊಳವೆ ಬಾವಿಗಳನ್ನಾದರೂ ಹಾಕಿಸುವುದಕ್ಕೆ ವ್ಯವಸ್ಥೆ ಮಾಡುತ್ತೇವೆ ಅದಿಲ್ಲದ್ದರೆ ಹೊರಗಡೆಯಿಂದ ಲಾರಿಗಳಿಂದಲಾದರೂ ನೀರನ್ನು ಹೊಡೆಸಿ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡ ಬೇಕಾಗುತ್ತದೆ. I will talk to the Rural Development Minister so far as supply of Drinking water to the villages on river bank is concerned.

ಶ್ರೀ ಧರ್ಮಸಿಂಗ್.—ತಾವು ಮೊದಲು ಬದಲಿ ವ್ಯವಸ್ಥೆಯನ್ನು ಮಾಡಿ.

ಶ್ರೀ ಎಚ್. ಡಿ. ದೇವೇಗೌಡ.—ಅದರ ಬಗ್ಗೆ ಪರೀಶಿಲನೆ ಮಾಡಿ ಏನು ಇದೆ ಎಂಬುದನ್ನು ನೋಡಿಸುತ್ತೇನೆ.

ಶ್ರೀ ಮಾಲಿಕಯ್ಯ ವಿ. ಗುತ್ತೇದಾರ್.—ಈಗಾಗಲೇ ಕಡ್ಡಿ ಗ್ರಾಮದ ಹತ್ತಿರ ಬ್ಯಾರೇಜೊಂದನ್ನು ನಿರ್ಮಿಸಲಾಗಿದ್ದು, ಅದು ಒಡೆದು ಹೋಗಿದೆ. ಅದನ್ನು ತಕ್ಷಣವೇ ರಿಪೇರಿ ಮಾಡಿಸಿದರೆ ಅದರಿಂದ ಅನುಕೂಲವಾಗಂತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರು ಬ್ಯಾರೇಜೊಂದರ ವಿಚಾರವನ್ನು ಹೇಳುತ್ತಿದ್ದಾರೆ. ಇದು ನನ್ನ ವ್ಯಾಪ್ತಿಯಲ್ಲಿ ಬರುವುದಾದರೆ, ನಾನು ಆ ಬಗ್ಗೆ ಕಾರ್ಯಕ್ರಮ ತೆಗೆದು ಕೊಳ್ಳುತ್ತೇನೆ. ಇಲ್ಲವೇ ಅದು ಜಿಲ್ಲಾಪರಿಷತ್ತಿನ ವ್ಯಾಪ್ತಿಯಲ್ಲಿ ಬರುವುದಾದರೆ, ಅವರಿಗೆ ಈ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುವಂತೆ ತಿಳಿಸುತ್ತೇನೆ.

ಶ್ರೀ ಜಿ. ರಾಜುಗೌಡ.—ಮಾನ್ಯ ಕಂದಾಯ ಮಂತ್ರಿಗಳು ಗಮನ ಸೆಳೆಯುತ್ತೇನೆ.

ಅಧ್ಯಕ್ಷರು.—ನಂತರ ಉತ್ತರ ತರಿಸಿಕೊಡುತ್ತೇನೆ. ಮಾನ್ಯ ಕಂದಾಯ ಮಂತ್ರಿಗಳು ಸಭೆಯಲ್ಲಿಲ್ಲ.

೨) ಚಿಕ್ಕಮಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ನಡೆದ ಡಕಾಯಿತಿಯ ಬಗ್ಗೆ.

ಶ್ರೀ ಆರ್. ವೆಂಕಟರಾಮಯ್ಯ.—ದಿನಾಂಕ ೨೧-೩-೧೯೮೮ ರಂದು ಚಿಕ್ಕಮಗಳೂರಿನಲ್ಲಿ ನಡೆದ ಡಕಾಯಿತಿ, ಕೋಲಾರ ಹಾಗೂ ರಾಜ್ಯದಲ್ಲಿನ ಕೆಲವು ನಗರಗಳ ಹಾಗೂ ಪಟ್ಟಣಗಳ ಹೊರವಲಯಗಳಲ್ಲಿ ನಡೆದಿರುವ ಡಕಾಯಿತಿ ಬಗ್ಗೆ ಗೃಹ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ(ಗೃಹ ಮಂತ್ರಿಗಳು).—

ವೃತ್ತಿನಿರತ ಅಪರಾಧ ಪ್ರವೃತ್ತಿಯ (ಪ್ರೊಫೆಶನಲ್) ತಂಡಗಳು ರಾಜ್ಯದ ಅಲ್ಲಲ್ಲಿ ಡಕಾಯಿತಿ ಅಪರಾಧಗಳನ್ನು ಮಾಡಿದ್ದು, ಅವುಗಳ ಪತ್ತೆ ಮತ್ತು ನಿಯಂತ್ರಣಕ್ಕೆ ಸರ್ಕಾರ ಸೂಕ್ತ ಕ್ರಮವನ್ನು ತೆಗೆದುಕೊಂಡಿದೆ. ರಾಜ್ಯದಲ್ಲಿ ಆಗುತ್ತಿರುವ ಡಕಾಯಿತಿ ಪ್ರಕರಣಗಳ ಪಿಡುಗು ಅಷ್ಟೇನೂ ವಿಂತಿಮಿಾರಿದ್ದಾಗಿಲ್ಲ. ಕಳೆದ ಎಂಟು ವರ್ಷಗಳಲ್ಲಿ ಆಗಿರುವ ಡಕಾಯಿತಿ ಪ್ರಕರಣಗಳ ಈ ಕೆಳಕಂಡ ಅಂಕಿಅಂಶಗಳು ಈ ವಿಷಯವನ್ನು ಸ್ಪಷ್ಟಪಡಿಸುತ್ತವೆ.

೧) ೧೯೮೦—೨೫೫	೫) ೧೯೮೪—೨೨೩
೨) ೧೯೮೧—೨೩೧	೬) ೧೯೮೫—೧೭೫
೩) ೧೯೮೨—೧೭೧	೭) ೧೯೮೬—೨೫೯
೪) ೧೯೮೩—೧೬೬	೮) ೧೯೮೭—೧೭೫

ಈ ವರ್ಷ ೧-೧-೧೯೮೮ ರಿಂದ ೧೫-೩-೮೮ರವರೆಗೆ ೬೫ ಪ್ರಕರಣಗಳು ವರದಿಯಾಗಿವೆ.